ಕೆ.ಪಿ.ಟಿ.ಸಿ.ಎಲ್. ಸಬ್ ಡಿವಿಜನ್ ಮತ್ತು ಆಫೀಸುಗಳು

36 (200) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ. (ಬಸವನ ಬಾಗೇವಾಡಿ):–ಮಾನ್ಯ ಇಂಧನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಿಜಾಪುರ ಜಿಲ್ಲೆ, ಬಸವನ ಬಾಗೇವಾಡಿಯಲ್ಲಿ ಕೆ.ಪಿ.ಟಿ.ಸಿ.ಎಲ್. ಸಬ್ ಡಿವಿಜನ್ ಮೇಲ್ದರ್ಜೆಗೇರಿಸುವ ಕಾರ್ಯ ವಿಳಂಬವಾಗಲು ಕಾರಣವೇನು;

ಆ) ಬಸವನ ಬಾಗೇವಾಡಿ ತಾಲ್ಲೂಕಿನ ಕೋಲ್ಹಾರ ಹಾಗೂ ನಿಡಗುಂದಿ ಗ್ರಾಮಗಳಿಗೆ ಕೆ.ಪಿ.ಟಿ.ಸಿ.ಎಲ್. ಸಬ್ ಡಿವಿಜನ್ ನಿರ್ಮಿಸುವ ಯೋಜನೆ ಯಾವ ಹಂತದಲ್ಲಿದೆ;

ಇ) ಇಂಗಳೇಶ್ವರ ಗ್ರಾಮಕ್ಕೆ ಕೆ.ಪಿ.ಟಿ.ಸಿ.ಎಲ್. ಸೆಕ್ಷನ್ ಆಫೀಸ್ ನಿರ್ಮಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳೇನು;

ಈ) ಬಸವನ ಬಾಗೇವಾಡಿಯಲ್ಲಿರುವ 220 ಕೆ.ವಿ. ಸ್ಟೇಷನ್‌ನ್ನು ಮೇಲ್ದರ್ಜೆಗೇರಿಸಿ 440 ಕೆ.ವಿ. ಸ್ಟೇಷನ್ ನಿರ್ಮಿಸುವ ವಿಚಾರದಲ್ಲಿ ಸರ್ಕಾರದಿಂದ ಕೈಗೊಂಡ ಕ್ರಮಗಳೇನು;

ಉ) ಬಿಜಾಪುರ ಜಿಲ್ಲೆಯಲ್ಲಿ ಸುಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸುವ ಕಾರ್ಯದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತಿದೆಯೇ;

ಊ) ಹಾಗಿದ್ದಲ್ಲಿ, ಈ ವಿಷಯವಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಋ) ಬಸವನ ಬಾಗೇವಾಡಿ ತಾಲ್ಲೂಕಿಗೆ ಮಂಜೂರಾಗಿರುವ ನಿರಂತರ ಜ್ಯೋತಿ ಯೋಜನೆಯಲ್ಲಿ ಪ್ರಾರಂಭವಾಗಿರುವ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಶೋಭಾ ಕರಂದ್ಲಾಜೆ (ಇಂಧನ ಸಚಿವರು):–

ಅ) ಬಿಜಾಪುರ ಜಿಲ್ಲೆ, ಬಸವನ ಬಾಗೇವಾಡಿಯಲ್ಲಿರುವ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಉಪ ವಿಭಾಗವನ್ನು ಕಾರ್ಯ ಮತ್ತು ಪಾಲನೆ ವಿಭಾಗ ಕಛೇರಿಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ, ಬಸವನ ಬಾಗೇವಾಡಿ ತಾಲ್ಲೂಕಿನ ಕೊಲ್ಹಾರ ಮತ್ತು ನಿಡಗುಂದಿ ಗ್ರಾಮಗಳಲ್ಲಿ ಕಾರ್ಯ ಮತ್ತು ಪಾಲನೆ ಉಪ ವಿಭಾಗೀಯ ಕಛೇರಿಯನ್ನು ಸ್ಥಾಪಿಸುವ ಹಾಗೂ ಇಂಗಳೇಶ್ವರ ಗ್ರಾಮದಲ್ಲಿ ಹೊಸದಾಗಿ ಕಾರ್ಯ ಮತ್ತು ಪಾಲನೆ

ಶಾಖಾ ಕಛೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆಗಳು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಪರಿಶೀಲನೆಯಲ್ಲಿರುತ್ತವೆ.

ಈ ಸ್ಥಳಗಳಲ್ಲಿ ಕ.ವಿ.ಪ್ರ.ನಿ.ನಿ.ಯ ಬೃಹತ್ ಕಾಮಗಾರಿಯ ಯಾವುದೇ ಕಛೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

ಈ) 220 ಕೆ.ವಿ. ಬಸವನ ಬಾಗೇವಾಡಿ ವಿದ್ಯುತ್ ಉಪಕೇಂದ್ರದಿಂದ ಸುಮಾರು 25 ಕಿ.ಮಿ. ದೂರದಲ್ಲಿರುವ ಕೂಡಿಗಿಯಲ್ಲಿ ಎನ್.ಟಿ.ಪಿ.ಸಿ. ಸಂಸ್ಥೆ ಮತ್ತು ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ 400 ಮೆ.ವ್ಯಾ. ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಯೋಜಿಸಲಾಗಿರುತ್ತದೆ.

ಈ ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ಉತ್ಪಾದಿಸಲಾಗಿರುವ ವಿದ್ಯುತ್ ಇತರೆ ರಾಜ್ಯಗಳಿಗೂ ಸಹ ಹಂಚಿಕೆಯಾಗುವುದರಿಂದ, ಭಾರತ ಸರ್ಕಾರ ಸ್ವಾಮ್ಯದ ಪವರ್ ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾರವರು ಒಂದು 765/400 ಕೆ.ವಿ. ಸಾಮರ್ಥ್ಯದ ವಿದ್ಯುತ್ ಉಪ ಕೇಂದ್ರವನ್ನು ಮತ್ತು ಅದಕ್ಕೆ ಸಂಬಂಧಿಸಿದ ವಿದ್ಯುತ್ ಮಾರ್ಗಗಳನ್ನು ನಿರ್ಮಿಸಲಿದ್ದಾರೆ.

ಈ ಹಿನ್ನೆಲೆಯಲ್ಲಿ ಬಸವನಬಾಗೇವಾಡಿಯಲ್ಲಿ 220 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು 400 ಕೆ.ವಿ. ವಿದ್ಯುತ್ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಕೈಬಿಡಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ತೀರ್ಮಾನಿಸಿದೆ.

ಉ ಮತ್ತು ಊ) ಬಿಜಾಪುರ ಜಿಲ್ಲೆಯಲ್ಲಿ ವಿಫಲವಾದ ವಿದ್ಯುತ್ ಪರಿವರ್ತಕಗಳ ದುರಸ್ಥಿ ಕಾರ್ಯವನ್ನು ಪ್ರತಿ ತಿಂಗಳು 75 ಸಂಖ್ಯೆಯಿಂದ 100 ಸಂಖ್ಯೆಗಳಿಗೆ ಹೆಚ್ಚಿಸಿ ಹೊಸ ಟೆಂಡರನ್ನು ಕರೆಯಲಾಗಿದೆ. ಹಾಲಿ ಬಿಜಾಪುರ ಮತ್ತು ಇಂಡಿಗಳಲ್ಲಿರುವ ವಿತರಣಾ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳಲ್ಲದೆ, ಬಸವನ ಬಾಗೇವಾಡಿಯಲ್ಲಿಯೂ ಸಹ ಹೊಸ ದುರಸ್ಥಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಈಗಾಗಲೇ ಎಲ್ಲಾ ವಿಭಾಗಗಳಿಗೆ ವಿಫಲವಾದ ವಿದ್ಯುತ್ ಪರಿವರ್ತಕಗಳನ್ನು ಜ್ಯೇಷ್ಠತಾ ಪಟ್ಟಿಯ ಅನುಗುಣವಾಗಿ ಬದಲಾಯಿಸಲು ಕಟ್ಟುನಿಟ್ಟಿನ ನಿರ್ದೇಶನವನ್ನು ನೀಡಲಾಗಿದೆ.

ಖ) ಬಸವನ ಬಾಗೇವಾಡಿಯಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು ದಿನಾಂಕ 31–6–2011 ರಂದು ಪ್ರಾರಂಭ ಮಾಡಲಾಗಿದ್ದು, ಕಾಮಗಾರಿಗಳನ್ನು 28–2–2012 ರೊಳಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂ. 36 (200)

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ: ಹಿಂದಿನ ಇಂಧನ ಸಚಿವರಾದ ಶ್ರೀ ಕೆ. ಎಸ್. ಈಶ್ವರಪ್ಪನವರು ಜಿಜಾಪುರಕ್ಕೆ ಬಂದಾಗ ಬಸವನವಾಗೇವಾಡಿ KEB Sub Division ಅನ್ನು division ಮಾಡಬೇಕೆಂದು ಬೇಡಿಕೆ ಇಟ್ಟಿದ್ದೆವು. ಅದರ ಜೊತೆಗೆ ಕೊಲ್ಹಾರ ಹಾಗೂ ನಿಡಗುಂದಿ ಗ್ರಾಮಗಳಿಗೆ sub division ಮಾಡಬೇಕು ಮತ್ತು section office ಮಾಡಬೇಕೆಂದು ಕೇಳಿದಾಗ, ಆವತ್ತು ಘೋಷಣೆ ಮಾಡಿ ಹೋಗಿದ್ದರು. ಆದರೆ, ಇವತ್ತಿನ ಸಚಿವರ ಉತ್ತರದಲ್ಲಿ ಅದರ ಬಗ್ಗೆ ಮಾಹಿತಿ ಇಲ್ಲ. ಇನ್ನೂ ಕೂಡ ಆ ಕಾರ್ಯಕ್ರಮ ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದರ ಜೊತೆ ಇರತಕ್ಕಂಥ ಮಾಲಿಂಗಪುರಕ್ಕೆ ಈಗಾಗಲೇ ತಾವು ಘೋಷಣೆ ಮಾಡಿ ಕಾರ್ಯ ಪ್ರಾರಂಭ ಮಾಡಿದ್ದೀರಿ. ಆದ್ದರಿಂದ, ಬಸವನವಾಗೇವಾಡಿಯಲ್ಲಿರುವ sub division ಅನ್ನು division ಆಗಿ ಮೇಲ್ದರ್ಜೆಗೇರಿಸುವ ಕೆಲಸ ಆಗಬೇಕು. ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಬಾಗೇವಾಡಿಯಲ್ಲಿರುವ 220 KV Station ಅನ್ನು 440 KV Station ಗೆ ಏರಿಸಬೇಕೆಂಬ ಯೋಜನೆ ಇತ್ತು. ಕೂಡಿಗೆಯಲ್ಲಿ 4000 MW ವಿದ್ಯುತ್ ಉತ್ಪಾದನೆ ಮಾಡುವ ಸಲುವಾಗಿ ಅದನ್ನು ಕೈಬಿಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಬಸವನಬಾಗೇವಾಡಿ ತಾಲ್ಲೂಕಿನ ಕೂಡಿಗೆಯಲ್ಲಿ ಉಷ್ಣ ವಿದ್ಯುತ್‌ನಿಂದ 4000 MW ಉತ್ಪಾದನೆ ಮಾಡುವ ಸಂದರ್ಭದಲ್ಲಿ ಆಗಿನ ಸಂಬಂಧಪಟ್ಟ ಇಂಧನ ಸಚಿವರಿಗೆ, ಮುಖ್ಯಮಂತ್ರಿಯವರಿಗೆ ನಾವು ಕೆಲವು ಕರಾರುಗಳನ್ನು ಹಾಕಿದ್ದೆವು. ಬೇರೆ ಜಿಲ್ಲೆಯಲ್ಲಿರುವ ಯೋಜನೆಯನ್ನು ನಮ್ಮ ತಾಲ್ಲೂಕಿಗೆ ತರಬೇಕಾದರೆ ಅಲ್ಲಿಯ ತಾಲ್ಲೂಕಿನ ಕೆರೆಗಳನ್ನು ತುಂಬಿಸಬೇಕು. ಆ ಯೋಜನೆ ಆದಮೇಲೆ ಆ ತಾಲ್ಲೂಕಿಗೆ 24 ತಾಸು 3 Phase Current ಕೊಡಬೇಕು. ಕೆಲವು ಶಾಲಾ ಕಾಲೇಜು ಹಾಸ್ಟೆಲ್ ಕೊಡುವಂಥದ್ದಾಗಬೇಕು ಎನ್ನುವ ಬೇಡಿಕೆ ಇಟ್ಟಿದ್ದೆವು. ಕೆರೆ ತುಂಬುವ ಸಂಬಂಧ ಇನ್ನೂ ಸ್ಪಷ್ಟ ಆದೇಶ ಬಂದಿಲ್ಲ. ಆ ಜಮೀನು ಕೊಟ್ಟಿರುವ ರೈತರಿಗೆ ಇನ್ನೂ ಹೆಚ್ಚಿನ ದರ ಕೊಡಬೇಕೆಂದು ಹೇಳಿದ್ದೆವು. ಈಗ ತಾವು ನೀರಾವರಿಗೆ ಎಕರೆಗೆ ರೂ. 7 ಲಕ್ಷ

ಕೊಟ್ಟಿದ್ದೀರಿ. ಒಣ ಬೇಸಾಯಕ್ಕೆ 5 ಲಕ್ಷ 25 ಸಾವಿರ ಕೊಟ್ಟಿದ್ದೀರಿ. ಅದನ್ನು ಹೆಚ್ಚಿಗೆ ಮಾಡಿ ನೀರಾವರಿಗೆ 12 ಲಕ್ಷ ರೂ. ಮತ್ತು ಒಣ ಬೇಸಾಯಕ್ಕೆ 10 ಲಕ್ಷ ರೂ. ಕೊಡಬೇಕೆನ್ನುವುದು ಆ ಭಾಗದ ರೈತರ ಬೇಡಿಕೆ ಇದೆ. ನಾನು ಆ ಜನರಿಗೆ ಈ ವಾರದಲ್ಲಿ ಸರ್ಕಾರದಿಂದ ಸ್ಪಷ್ಟ ಆದೇಶ ಕೊಡಿಸುತ್ತೇನೆಂದು ಹೇಳಿ ಬಂದಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಸಭೆ ಮಾಡಿ ಈ ವಾರದಲ್ಲಿ ಆ ಜಮೀನು ಕೊಟ್ಟ ರೈತರಿಗೆ ಒಂದು ಎಕರೆಗೆ ಕನಿಷ್ಠ 10 ಲಕ್ಷ ರೂ. ಕೊಡಬೇಕೆಂದು ಆದೇಶ ಮಾಡಬೇಕು.

ಉಪಾಧ್ಯಕ್ಷರು: ತಾವು ಭಾಷಣ ಮಾಡಬೇಡಿ. ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟದ್ದು ಮಾತ್ರ ಕೇಳಿ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ: ಉಷ್ಣ ವಿದ್ಯುತ್‌ನಿಂದ 4000 MW ಉತ್ಪಾದನೆ ಮಾಡುವಾಗ ಸರ್ಕಾರ NTPC ಯಿಂದ ಮಾತು ಕೊಟ್ಟಿದೆ. ಇದರ ಬಗ್ಗೆ ಸ್ಪಷ್ಟಪಡಿಸಬೇಕು ಮತ್ತು ರೈತರಿಗೆ ಹೆಚ್ಚಿನ ದರ ಕೊಡುವಂಥದ್ದು ಆಗಬೇಕು. ಬಾಗೇವಾಡಿ, ಬಿಜಾಪುರ, ಇಂಡಿಯಲ್ಲಿ ಸುಟ್ಟಿರುವ transformer ಗಳನ್ನು ತುಂಬುವ ಕೆಲಸ ನಿಧಾನಗತಿಯಲ್ಲಿದೆ. ತಾವು ವಿಫಲವಾದ ವಿದ್ಯುತ್ ಪರಿವರ್ತಕಗಳ ದುರಸ್ಥಿ ಕಾರ್ಯವನ್ನು ಪ್ರತಿ ತಿಂಗಳು 75 ಸಂಖ್ಯೆಯಿಂದ 100 ಸಂಖ್ಯೆಗಳಿಗೆ ಹೆಚ್ಚಿಸುತ್ತೇವೆಂದು ಹೇಳಿದ್ದೀರಿ. ಅಲ್ಲಿ ಕೇಳಿದರೆ, ಇನ್ನೂ ಆಗಿಲ್ಲವೆಂದು ಹೇಳುತ್ತಿದ್ದಾರೆ. ಇತ್ತೀಚಿನ ಕೆಡಿಪಿ ಸಭೆಯಲ್ಲಿ ESCOM MD ಬಂದಾಗ ಎಲ್ಲಾ ಶಾಸಕರು ಬೇಡಿಕೆ ಇಟ್ಟಿದ್ದೆವು, ಆದರೆ, ಅವರು ಆಗಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ. Transformer ಸುಟ್ಟ ಕೂಡಲೇ ಕನಿಷ್ಠ ಒಂದು ವಾರದಲ್ಲಿ ಆ ರೈತರಿಗೆ ಕೊಡುವಂಥದ್ದು ಆಗಬೇಕು. ಈ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು.

ಕು॥ ಶೋಭಾ ಕರಂದ್ಲಾಜೆ: ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಬಂಧಿಸಿದಂತೆ, HESCOM ಮತ್ತು GESCOM ನ ಪ್ರದೇಶಗಳಲ್ಲಿ AE, JE, Lineman ಗಳ ದೊಡ್ಡ ಪ್ರಮಾಣದ ಕೊರತೆ ರಾಜ್ಯದಲ್ಲಿದೆ. ಉತ್ತರ ಕರ್ನಾಟಕದ HESCOM ಮತ್ತು GESCOM area ಗಳಲ್ಲಿ ದೊಡ್ಡ ಪ್ರಮಾಣದಲ್ಲಿದೆ. AE, JE, Lineman ಗಳ recruitment ಮಾಡದೆ station ಮಾಡಿದರೆ ಅಲ್ಲಿಗೆ ಅಧಿಕಾರಿಗಳನ್ನು linemen ಕೊಡುವಂಥ ದೊಡ್ಡ ಪ್ರಮಾಣದ ಕೊರತೆ ಎದುರಾಗುತ್ತದೆ. ನಾವು ಮಾಡಿರುವ sub division ಗಳಲ್ಲಿ AE, AEE,JE Linemen ಇಲ್ಲ ಎಂದು ಎಲ್ಲಾ ಶಾಸಕರ ಬೇಡಿಕೆ ಇದೆ. ನಾವು ಎರಡೂವರೆ ಸಾವಿರ

linemen ತುಂಬುವುದಕ್ಕೆ ಆಗಲೇ ಕ್ರಮ ಕೈಗೊಂಡಿದ್ದೇವೆ. ಈ ಎರಡೂವರೆ ಸಾವಿರ ಜನ ರಾಜ್ಯದ 5 ESCOM ಗಳಲ್ಲಿ ಹಂಚಿ ಹೋಗುತ್ತಾರೆ. ಬರುವ ದಿನಗಳಲ್ಲಿ AE, JE ಗಳನ್ನು ತುಂಬುವ ಪ್ರಯತ್ನವನ್ನು ಮಾಡಿ ಈ ಸಂಬಂಧ ನಾವು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಕಳುಹಿಸಿದ್ದೇವೆ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಬರುವ ದಿನಗಳಲ್ಲಿ ನಮ್ಮ staff ಆಧಾರದ ಮೇಲೆ ಇದನ್ನು ಖಂಡಿತ ಪರಿಶೀಲನೆ ಮಾಡುತ್ತೇನೆ. ಇನ್ನು ಅವರು 220 KV station ಬಗ್ಗೆ ಕೇಳಿದ್ದಾರೆ. ಕೂಡಿಗೆಯಲ್ಲಿ 765 X 400 KV station ಆರಂಭವಾಗುವಂಥ ಕಾರಣಕ್ಕಾಗಿ ಅವರು ಕೇಳಿದ station ಅನ್ನು ಆ ಭಾಗದಲ್ಲಿ ಅವರಿಗೆ ಅಗತ್ಯವಿರುವುದಿಲ್ಲ. ಅದಕ್ಕಾಗಿ, ಕೂಡಿಗೆಯಲ್ಲಿ ಈ station ನಿಂದ ಬರುವ ದಿನಗಳಲ್ಲಿ ಲಾಭವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನೊಂದು ಇಡೀ ರಾಜ್ಯದಲ್ಲಿ ಇವತ್ತು transformerಗಳ ರಿಪೇರಿ ಬಹಳ ದೊಡ್ಡ ಪ್ರಮಾಣದ ಕೊರತೆ ಇತ್ತು. ಯಾರು ಹಿಂದೆ transformer ರಿಪೇರಿ ಮಾಡುತ್ತೇವೆಂದು ಹೇಳಿ ಟೆಂಡರ್ ಪಡೆದುಕೊಂಡಿದ್ದಾರೋ ಅವರು 75 transformer ಗಳ ರಿಪೇರಿ ಮಾಡುತ್ತೇವೆಂದು ಹೇಳಿ ಕೇವಲ 30–35 ಮಾತ್ರ ಮಾಡುತ್ತಿದ್ದರು. ಇವೆಲ್ಲವನ್ನು ಕ್ಯಾನ್ಸಲ್ ಮಾಡಿ ಹೊಸದಾಗಿ ಟೆಂಡರ್ ಕರೆದು ಇವತ್ತು ಇಡೀ ರಾಜ್ಯದಲ್ಲಿ ಹೊಸ transformer ರಿಪೇರಿ ಸೆಂಟರ್‌ಗಳನ್ನು ಆರಂಭ ಮಾಡಿದ್ದೇವೆ. ಅದೇ ರೀತಿ ಬಸವನಬಾಗೇವಾಡಿಯಲ್ಲೂ ಕೂಡ ಹೊಸದಾಗಿ ಒಂದು ರಿಪೇರಿ ಸೆಂಟರ್‌ನ್ನು ಕೊಟ್ಟಿದ್ದೇವೆ. ಇನ್ನೊಂದು ಮುಖ್ಯವಾಗಿ ನಿರಂತರ ಜ್ಯೋತಿ ಬಗ್ಗೆ ಕೇಳಿದ್ದಾರೆ. ನಿರಂತರ ಜ್ಯೋತಿ ಬಂದಾಗ transformerಗಳೇನು ಸುಡುತ್ತೆ, ಇದು ಇಡೀ ರಾಜ್ಯದಲ್ಲಿ ಕಡಿಮೆಯಾಗುವಂತದ್ದು ಆರಂಭವಾಗುತ್ತದೆ. ಏಕೆಂದರೆ ಈಗ ನಾವು ಸಿಂಗಲ್ ಲೈನ್ ಕೊಟ್ರೂ ಕೂಡ ಅದಕ್ಕೆ ಕೆಪಾಸಿಟರ್ ಹಾಕಿ ತ್ರೀಫೇಸ್ ತೆಗೆದುಕೊಳ್ಳುತ್ತಾರೆ. ಮತ್ತು ರಾಜ್ಯದಲ್ಲಿ ಹೆಚ್ಚುವರಿ ಪಂಪ್‌ಸೆಂಟ್‌ಗಳನ್ನು ಅನಧಿಕೃತವಾಗಿ ಉಪಯೋಗ ಮಾಡುತ್ತಿದ್ದಾರೆ. ಒಂದು ಸಾರಿ ನಿರಂತರ ಜ್ಯೋತಿ ಹಾಕಿದರೆ ಸಿಂಗಲ್ ಲೈನ್ ಕೊಟ್ಟಾಗ 24 ಗಂಟೆಗಳ ವಿದ್ಯುತ್‌ನ್ನು ಕೊಡುವುದಕ್ಕೆ ಖಂಡಿತ ಅನುಕೂಲವಾಗುತ್ತದೆ. ತ್ರಿಫೇಸ್ ಎಷ್ಟು ಕೊಡುತ್ತೇವೆಯೋ ಅಷ್ಟೆಲ್ಲಾ ರೈತರಿಗೆ ಒಂದು ಗುಣಮಟ್ಟದ ವಿದ್ಯುಚ್ಛಕ್ತಿ ಕೊಡುವುದಕ್ಕೆ ಅನುಕೂಲವಾಗುತ್ತದೆ. ನಿರಂತರ ಜ್ಯೋತಿಗೆ ಬಂದರೆ transformer ಸುಡುವಂಥದ್ದು ಮತ್ತು ಉಳಿದಂಥ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ.

2012–ಫೆಬ್ರವರಿ ಒಳಗೆ ಬಸವನಬಾಗೇವಾಡಿ ತಾಲ್ಲೂಕಿನ ನಿರಂತರ ಜ್ಯೋತಿ ಯೋಜನೆಯ ಕೆಲಸ ಕಾರ್ಯಗಳನ್ನು ನಾವು ಪೂರ್ಣವಾಗಿ ಮಾಡುತ್ತೇವೆ ಎನ್ನುವಂತಹ ಭರವಸೆಯನ್ನು ಕೊಡುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಬಹುತೇಕ ಭಾಗದಲ್ಲಿ ಈ ಟ್ರಾನ್ಸ್‌ಫಾರ್ಮರ್ಸ್ ಸಮಸ್ಯೆಯಿದೆ. ದಯವಿಟ್ಟು ಈ ಬಗ್ಗೆ ತಾವು ಗಮನ ಕೊಡಬೇಕು.

ಕುಮಾರಿ ಶೋಭಾ ಕರಂದ್ಲಾಜೆ : ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್.ಕೆ. ಬೆಳ್ಳುಬ್ಬಿ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಭಾಗದಲ್ಲೂ ಈ ಸಮಸ್ಯೆಯಿದೆ. ಉಪಾಧ್ಯಕ್ಷರು: ಮೊದಲು ರೇವಣ್ಣನವರು ಮಾತನಾಡಲಿ, ನೀವು ಮತ್ತೆ ಮಾತನಾಡಿ. ರೇವಣ್ಣನವರು ಅದಕ್ಕೆ ಉಪ ಪ್ರಶ್ನೆ ಕೇಳುತ್ತಿದ್ದಾರೆ.

ಶ್ರೀ ಎಸ್. ಆರ್. ಶ್ರೀನಿವಾಸ : ಇದು ಅವರಿಗೂ ನಮಗೂ ಸಂಬಂಧಪಟ್ಟಿದ್ದು.

ಉಪಾಧ್ಯಕ್ಷರು: ನಿಮಗೂ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ. ರೇವಣ್ಣನವರೇ, ಅದೇ ಪ್ರಶ್ನೆ ಕೇಳುತ್ತಿದ್ದೀರಿ ತಾನೆ? ಅದಕ್ಕೆ ಪೂರಕವಾಗಿ ಕೇಳುತ್ತಿದ್ದಾರೆ. ಮತ್ತೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೇ, ಇಂಧನ ಸಚಿವರು, ರಾಜ್ಯದಲ್ಲಿ ಟ್ರಾನ್ಸ್‌ಫಾರ್ಮರ್ ವಿಷಯದಲ್ಲಿ ಹಿಂದೆ 75 ಟ್ರಾನ್ಸ್‌ಫಾರ್ಮರ್‌ಗಳನ್ನು ಏನು ಕೊಟ್ಟಿದ್ದರೊ, ಅದ್ಯಾವುದೂ ಕೆಲಸ ಮಾಡುತ್ತಿಲ್ಲ ಎಂದು ಹೇಳಿದರು. ಉದಾಹರಣೆಗೆ, ನನ್ನ ತಾಲ್ಲೂಕಿನಲ್ಲಿ ಆರು ತಿಂಗಳಿನಿಂದ ಒಂದು ವರ್ಷವಾದರೂ ಟ್ರಾನ್ಸ್‌ಫಾರ್ಮರ್ ಬದಲಾವಣೆ ಮಾಡಿಲ್ಲ. ನಾನು ಹತ್ತಾರು ಸಾರಿ ಇಂಧನ ಸಚಿವರ ಗಮನಕ್ಕೆ ತಂದಿದ್ದೇನೆ ಆದರೆ ಅವರು ಸಿಗುತ್ತಿಲ್ಲ ಇದು ಬೇರೆ ವಿಷಯ. ಆರು ತಿಂಗಳು ಒಂದು ವರ್ಷ ಆದರೂ ಟ್ರಾನ್ಸ್‌ಫಾರ್ಮರ್ ಹಾಕುತ್ತಿಲ್ಲ. ದಯಮಾಡಿ ಕುಡಿಯುವ ನೀರಿಗಾದರೂ ಆದ್ಯತೆ ಕೊಟ್ಟು transformer ಹಾಕಿ. ತಾವು ಬೇಕಾದರೆ ಕೇಳಿ ಹರಪ್ಪನ ಹೊಸಹಳ್ಳಿ, ಕಳ್ಳಿ ಕೊಪ್ಪಲು, ಮುಂತಾದ ಹಳ್ಳಿಗಳ ಹೆಸರುಗಳನ್ನು ಬೇಕಾದರೆ ಪಟ್ಟಿ ಮಾಡಿ ಕೊಡುತ್ತೇನೆ. ಕುಡಿಯುವ ನೀರಿಗೆ ದುಡ್ಡು ಕಟ್ಟಿದ್ದಾರೆ. ದುಡ್ಡು ಕಟ್ಟಿದ್ದರು. transformer ಹಾಕುವುದಕ್ಕೆ ಏನು ಕಷ್ಟ? ದಯಮಾಡಿ ಚಾಮುಂಡೇಶ್ವರಿ (ಚೆಸ್ಕಾಂ) ಎಂ.ಡಿ. ಯವರಿಗೆ ಸ್ವಲ್ಪ ಹೇಳಿ. ಇಷ್ಟೆಲ್ಲಾ ಮಾಡಿದರೂ ಏನಾಗುತ್ತದೆ ಎಂದರೆ ಪೇಪರ್ ಮೇಲೆ ಮಾಡಿದ ಹಾಗೆ ಆಗುತ್ತದೆ. ದಯಮಾಡಿ

ಇದು ಆಗಬಾರದು. ಅವರಿಗೆ ಕಟ್ಟುನಿಟ್ಟಾಗಿ ಸೂಚನೆ ಕೊಟ್ಟು at least ಕುಡಿಯುವ ನೀರು ಏನು ರೈತರ ಐ.ಪಿ ಸೆಟ್ ಇದೆ, ಅದಕ್ಕಾದರೂ transformer ಹಾಕಿ ಕೊಡಿ. ಸ್ಪಷ್ಟವಾದ ಸೂಚನೆ ಕೊಡಿ ಎಂದು ಮನವಿ ಮಾಡುತ್ತೇನೆ.

ಉಪಾಧ್ಯಕ್ಷರು : ಪಾಟೀಲ್ ಕೂಡ ಕೇಳಲಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಸನ್ಮಾನ್ಯ ಶಾಸಕ ಮಿತ್ರರು ಹೇಳಿದ ಹಾಗೆ ಪವರ್ ಪ್ಲಾಂಟ್‌ಅನ್ನು ಮಾಡುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ, ಇವತ್ತಿನವರೆಗೂ ಬಹುಶಃ ಆದೇಶ ಮಾಡಿ ಮೂರು ವರ್ಷವಾಗಿರಬೇಕು ಆ ಭಾಗದ ಶಾಸಕರನ್ನು ಕರೆದು ಅಲ್ಲಿ ಏನು ಸಾಧಕ ಬಾಧಕ ಇದೆ, ಅನ್ನುವುದರ ಬಗ್ಗೆ ಚರ್ಚೆ ಮಾಡಬೇಕು ಎನ್ನುವಂಥ ಕನಿಷ್ಠ ಒಂದು. ಸೌಜನ್ಯವನ್ನು ಕೂಡ ಸರ್ಕಾರ ಅಥವಾ ಮಂತ್ರಿಗಳು ತೋರಿಸಿಲ್ಲ ಇದು ಒಂದು. ಎರಡನೆಯದು, ಆ ಭಾಗದಲ್ಲಿ ಕನಿಷ್ಠ 20–30 ಸಾರಿ ಸಾವಿರಾರು ಜನ ರೈತರು ಇವತ್ತು ಹೋರಾಟ ಮಾಡಿದ್ದಾರೆ. ಅಲ್ಲಿ ಬರಬಾರದು, ಅದರಿಂದ ತೊಂದರೆಯಾಗುತ್ತದೆ, ಪರಿಸರ ಮಾಲಿನ್ಯವಾಗುತ್ತದೆ, ಅದಕ್ಕೆ ಮೇಲ್ಮನೆ ನಾಯಕರು ಕೂಡ ಪಾದಯಾತ್ರೆ ಮಾಡಿದ್ದಾರೆ. ಇವತ್ತಿನವರೆಗೂ ಕೂಡ ನಾನು ಸರ್ಕಾರಕ್ಕೆ ವಿನಂತಿ, ಆಗ್ರಹ ಮಾಡುತ್ತೇನೆ. ಅಲ್ಲಿ ವಿದ್ಯುತ್ ಸ್ಥಾವರ ಹಾಕುವುದರಿಂದ ಉಷ್ಣಾಂಶ ಹೆಚ್ಚಾಗುತ್ತದೆ. ಈಗಾಗಲೇ ನಾವು ಬರಗಾಲದ ಬವಣೆಯಲ್ಲಿದ್ದೇವೆ. 42–43 ಡಿಗ್ರಿ ಸೆಂಟಿಗ್ರೇಡ್‌ನಲ್ಲಿ temperature ಇದೆ. ಅಂತಹ ಒಂದು ಪರಿಸ್ಥಿತಿಯಲ್ಲಿ ನೀವು ಅಲ್ಲಿ ವಿದ್ಯುತ್ ಸ್ಥಾವರ ಸ್ಥಾಪನೆ ಮಾಡುತ್ತಿದ್ದೀರಿ. ಆ ಸಂದರ್ಭದಲ್ಲಿ ಜನರಿಗೆ ಆಗತಕ್ಕಂತ ನೋವು ಏನಿದೆ, ಅನ್ಯಾಯ ಏನಾಗುತ್ತದೆ, ಪರಿಸರ ಮಾಲಿನ್ಯ ಏನಾಗುತ್ತದೆ. ಅದರ ಬಗ್ಗೆ ನೀವು ಗಂಭೀರವಾಗಿ ಚರ್ಚೆ ಮಾಡಬೇಕು ಮತ್ತು ನಮ್ಮ ಜಿಲ್ಲೆಯ ಎಲ್ಲಾ ಶಾಸಕರ ಸಭೆಯನ್ನು ಕೂಡಲೇ ಕರೆಯಬೇಕು. ಸರ್ಕಾರ ಕನಿಷ್ಠ ಪಕ್ಷ ಜನರಿಗೆ ತಿಳಿಸತಕ್ಕಂತಹ ಕೆಲಸವನ್ನಾದರೂ ಮಾಡಬೇಕು. ಅದನ್ನು ಮಾಡದೇ ಏಕಾಏಕಿ ತಾವು ಒಂದು ತೀರ್ಮಾನ ತೆಗೆದುಕೊಂಡು ವಿದ್ಯುತ್ ಸ್ಥಾವರ ಸ್ಥಾಪನೆ ಮಾಡುವುದಕ್ಕೆ ಹೊರಟಿದ್ದೀರಿ. ಅಲ್ಲಿ ಈಗಾಗಲೇ ಸಾಕಷ್ಟು ಹೋರಾಟಗಳಾಗಿದೆ. ಇದೇ ರೀತಿ ಸರ್ಕಾರ ಅಲ್ಲಿನ ಜನರ ಬಗ್ಗೆ ನಾವೆಲ್ಲ ಇರಬೇಕಾಗುತ್ತದೆ ಎನ್ನತಕ್ಕಂತಹ ಎಚ್ಚರಿಕೆಯನ್ನು ಈ ಮುಖಾಂತರ ಸರ್ಕಾರಕ್ಕೆ ಕೊಡುವುದಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು: ಮಂತ್ರಿಗಳು ಪರಿಶೀಲಿಸಿ.

ಕುಮಾರಿ ಶೋಭಾ ಕರಂದ್ಲಾಜೆ : ಪರಿಶೀಲಿಸುತ್ತೇನೆ.

ಶ್ರೀ ಎಸ್. ಆರ್. ಶ್ರೀನಿವಾಸ : ಮಾನ್ಯ ಉಪಾಧ್ಯಕ್ಷರೆ, 2000 unauthorized ಪಂಪ್‌ಸೆಟ್‌ಗಳ ರಿಜಿಸ್ಟರ್ ಆಗಿದೆ. ಆದರೆ 15,000 ರೂಪಾಯಿ ಕಟ್ಟುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಅದರಲ್ಲಿ 100 ಜನ ರೈತರು 15,000 ರೂಪಾಯಿಗಳನ್ನು ತುಂಬಿದ್ದಾರೆ. 15,000 ರೂಪಾಯಿಗಳನ್ನು ತುಂಬಿದ್ದರೂ ಕೂಡ ಅವರಿಗೆ ನೀವು unauthorized ಏನಿದೆ, ಅದಕ್ಕೆ ಪ್ರತ್ಯೇಕವಾಗಿ transformer ಕೊಡುವುದಕ್ಕೆ ಆಗಲಿ ಅಥವಾ authorized ಮಾಡತಕ್ಕಂಥದ್ದಕ್ಕೆ ನೀವು ಅವಕಾಶ ಮಾಡಿಕೊಟ್ಟಿಲ್ಲ. ಸರ್ಕಾರ ನಿಗದಿಗೊಳಿಸಿ 15,000 ರೂಪಾಯಿಗಳೆಂದು ಹೇಳಿದರು, ಕಟ್ಟುವುದಕ್ಕೆ ನಮ್ಮ ತಾಲ್ಲೂಕಿನಲ್ಲಿ ready ಇದ್ದೇವೆ. 20,000 ಹೇಳಿದರೂ ಕಟ್ಟುವುದಕ್ಕೆ ready ಇದ್ದೇವೆ. ಆದರೆ ನೀವು ಹಣ ಕಟ್ಟಿರತಕ್ಕಂತಹ ರೈತರಿಗೆ transformer ಕೊಡತಕ್ಕಂತಹದ್ದು ಅತಿ ಶೀಘ್ರದಲ್ಲಿ ಆಗಬೇಕು. ಹಣ ಕಟ್ಟುತ್ತಿದ್ದ ಹಾಗೆ transformerಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಪಂಟ್‌ಸೆಟ್‌ಗಳು, T.Cಗಳು ಸುಡುವುದು ಕಡಿಮೆಯಾಗುತ್ತದೆ. ಇವತ್ತು ನಮ್ಮ ತಾಲ್ಲೂಕಿನಲ್ಲೇ 100 ಕೆ.ವಿ ಯದು ಸುಮಾರು 65 T.Cಗಳು ಸುಟ್ಟಿದೆ, 63 ಕೆ.ವಿ ಯದು ಸುಮಾರು 70 T.Cಗಳು ಸುಟ್ಟಿದೆ. ನಿರಂತರವಾಗಿ ನೀವು T.Cಗಳನ್ನು ಕೊಡದಿದ್ದರೆ unauthorized T.Cಗಳನ್ನು authorize ಮಾಡುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳದಿದ್ದರೆ, ನೀವು ಎಷ್ಟೇ T.Cಗಳನ್ನು ಕೊಟ್ಟರೂ ಕೂಡ ಸುಡುವುದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ನಾವು ಹಣ ಕಟ್ಟುವುದಕ್ಕೆ ತಯಾರಿದ್ದೇವೆ, ಹಣ ಕಟ್ಟುತ್ತಿದ್ದ ಹಾಗೆ ನೀವು T.Cಗಳನ್ನು ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಸ್. ಕೆ. ಬೆಳ್ಳುಬ್ಬಿ : ಅನಧಿಕೃತ ಪಂಪಸೆಟ್‌ಗೆ ಏನು ಅವಧಿ ಕೊಟ್ಟಿದೆ, ಆ ಅವಧಿಯನ್ನು ವಿಸ್ತಾರ ಮಾಡಿ ಯಾರ ಬೋರ್‌ಗೆ ನೀರು ಬೀಳುತ್ತದೆಯೋ ಅವರೇನಾದರೂ ವಿದ್ಯುತ್ ಸಂಪರ್ಕ ಕೇಳಿದರೆ ಅವರಿಗೂ ಕೂಡ ವಿದ್ಯುತ್ ಸಂಪರ್ಕ ಕೊಡುವಂತಹ ವ್ಯವಸ್ಥೆ ಮಾಡಿದರೆ ಕನಿಷ್ಠ ಬರಗಾಲದಲ್ಲಿಯಾದರೂ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ದಯವಿಟ್ಟು ಅವಧಿ ವಿಸ್ತಾರ ಮಾಡಬೇಕೆಂದು ತಮ್ಮಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ತಾವು ಅಕ್ರಮ ಮತ್ತು ಸಕ್ರಮ ಯೋಜನೆಯನ್ನು ಜಾರಿ ಮಾಡಿದ್ದೀರಿ. ನಮ್ಮ ಕ್ಷೇತ್ರದಲ್ಲಿ ನಾವು ರೈತರನ್ನು ಕರೆದು ಯಾರ್ಯಾರು ಅಕ್ರಮವಾಗಿ ವಿದ್ಯುತ್‌ನ್ನು ಬಳಸುತ್ತಿದ್ದಾರೆ, ಅವರಿಗೆ ದುಡ್ಡು ಕಟ್ಟುವುದಕ್ಕೆ ಹೇಳುತ್ತಿದ್ದೇವೆ. ಮೊನ್ನೆ ಕೂಡ ಜಿಲ್ಲಾ ಉಸ್ತುವಾರಿ ಸಚಿವರು ಸಭೆ ಕರೆದಾಗ ಅದರಲ್ಲಿ ಎಷ್ಟು ಜನ ಕಟ್ಟಿದ್ದಾರೆ ಎಂದು ಎಲ್ಲವನ್ನೂ ಹೇಳಿದ್ದೇವೆ.

ಉಪಾಧ್ಯಕ್ಷರು: ನಾವು ಪ್ರಶ್ನೋತ್ತರದಲ್ಲಿದ್ದೇವೆ. ನಿಮಗೇನು ಬೇಕು ಆ ಪಾಯಿಂಟ್ ಮಾತ್ರ ಕೇಳಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಒಂದು ನಿಮಿಷ ಮುಗಿಸುತ್ತೇನೆ. ಸಕ್ರಮ ಮಾಡಬೇಕಾದರೆ ಕೆ.ಇ.ಬಿ estimate ಯವರು ಮಾಡುತ್ತಿದ್ದಾರೆ. ಅದಕ್ಕೆ ಕಂಬಗಳು ಬೇಕು, transformer ಬೇಕು, ವೈರ್‌ಗಳು ಬೇಕು ಇವೆಲ್ಲಾ ಅಂದಾಜು ಮಾಡಿದರೆ ಸುಮಾರು ಒಂದು ಲಕ್ಷ ಅಂದಾಜು ವೆಚ್ಚ ಬರುತ್ತದೆ. ನಮ್ಮ ಹತ್ತಿರ ಅಷ್ಟು ಹಣ ಇಲ್ಲ, ಅಕ್ರಮವನ್ನು ಸಕ್ರಮ ಮಾಡುವುದಕ್ಕೆ ರೈತರಿಗೆ ನಾವು ವಿದ್ಯುತ್ ಸಂಪರ್ಕ ಕೊಡುವುದಕ್ಕಾಗುವುದಿಲ್ಲ. ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ದಯವಿಟ್ಟು ತಾವು ಈ ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತೀರೆಂಬ ಎಂಬ ಬಗ್ಗೆ ಸ್ಪಷ್ಟವಾದ ವಿಚಾರವನ್ನು ಈ ಸದನದ ಮೂಲಕ ತಿಳಿಸಿದರೆ ನಮಗೆ ಒಳ್ಳೆಯದಾಗುತ್ತದೆ ಎಂದು ನನ್ನ ಭಾವನೆ.

ಶ್ರೀ ಎ.ಎಸ್. ಪಾಟೀಲ್: ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಡಲಿಲ್ಲ ಬಹಳ ಗಂಭೀರವಾದ ಸಮಸ್ಯೆಯನ್ನು ಇಲ್ಲಿ ಕೇಳಿದ್ದೇನೆ.

ಉಪಾಧ್ಯಕ್ಷರು: ನಾನು ಸಚಿವರಿಗೆ ಗಮನಿಸುವುದಕ್ಕೆ ಹೇಳಿದ್ದೇನೆ.

ಕುಮಾರಿ ಶೋಭಾ ಕರಂದ್ಲಾಜೆ : ಈ ಪ್ರಶ್ನೆಯಲ್ಲಿ ಅದು ಇರಲಿಲ್ಲ. ತಾವು ಬೇರೆ ರೂಪದಲ್ಲಿ ತನ್ನಿ, ಉತ್ತರ ಹೇಳುತ್ತೇನೆ.

ಉಪಾಧ್ಯಕ್ಷರು: ಪಾಟೀಲ್‌ರವರೇ, ನಿಮಗೆ ಅವಕಾಶ ಕೊಟ್ಟಿದ್ದೇವೆ. ಪರಿಶೀಲಿಸುವುದಕ್ಕೆ ಹೇಳಿದ್ದೇವೆ.

ಶ್ರೀ ಎ.ಎಸ್. ಪಾಟೀಲ್: ನಾನೇನು ಬೇರೆ ಪ್ರಶ್ನೆ ಕೇಳಿದ್ದೇನೆಯೇ?

ಉಪಾಧ್ಯಕ್ಷರು: ನೀವು ಬೇರೆ ರೂಪದಲ್ಲಿ ಇದನ್ನು ತಂದು ಚರ್ಚೆ ಮಾಡಿ.

ಶ್ರೀ ಪ್ರಕಾಶ್. ಬಿ. ಹುಕ್ಕೇರಿ : ನನ್ನ ಪ್ರಶ್ನೆಗೆ ಉತ್ತರ ಕೊಡಿಸಿ. ಇಲ್ಲಿ ಬೇರೆ ರೀತಿಯಾಗಿ ಪ್ರಶ್ನೆ ಕೇಳುವ ಅವಶ್ಯಕತೆ ಇಲ್ಲ. ಉತ್ತರವನ್ನು ಕೊಡಿಸಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಸದಸ್ಯರು ಇಲ್ಲಿ transformer Conductors ಲ್ಲಿಕೊರತೆ ಇದೆ, ಎಲ್ಲಾ ಕ್ಷೇತ್ರಗಳಲ್ಲೂ ಈ ಸಮಸ್ಯೆ ಇದೆ. Transformer ಗಳು ಒಂದೊಂದು ತಿಂಗಳು, ಎರಡೆರಡು ತಿಂಗಳು, ಮೂರ್ನೂರು ತಿಂಗಳು ಸುಟ್ಟು ಹೋಗಿ ಅವುಗಳನ್ನು ಬದಲಾವಣೆ ಮಾಡುವುದಕ್ಕಾಗುತ್ತಿಲ್ಲ. ಪರ್ಯಾಯವಾಗಿ ಇವರು ಕೊಡುವುದಿಲ್ಲ. ಅದನ್ನು ಬಿಚ್ಚಿಕೊಂಡು ಹೋಗಬೇಕು, ರಿಪೇರಿ ಮಾಡಬೇಕು, ತರಬೇಕು ಈ ತರಹದ ಪರಿಸ್ಥಿತಿ ಇದೆ. ಅದಕ್ಕೋಸ್ಕರ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅರ್ಧ ಗಂಟೆ ಚರ್ಚೆಯಾಗಬೇಕೆಂದು ಹೇಳುತ್ತಾರೆ. ನೀವು ಒಪ್ಪಿದರೆ ಚರ್ಚೆ ಮಾಡೋಣ. ನೀವು ಕೊಡುವುದಕ್ಕೆ ತಯಾರಾಗಿದ್ದೀರಿ ಎಂದೆನಿಸುತ್ತದೆ. ಸರ್ಕಾರದಿಂದ ಸ್ವಲ್ಪ ದುಡ್ಡನ್ನು ಹೆಚ್ಚಾಗಿ ತೆಗೆದುಕೊಂಡು ಕೊಡಿ. ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ಕಾಲಾವಕಾಶ ಕೊಡಿ.

ಕು. ಶೋಭಾ ಕರಂದ್ಲಾಜೆ: (ಇಂಧನ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಸದಸ್ಯರು ಟ್ರಾನ್ಸ್‌ಫಾರ್ಮರ್ ಬಗ್ಗೆ ಹೇಳಿದ್ದಾರೆ. ಇವತ್ತಿನ ದಿವಸ ಅಕ್ರಮ ಪಂಪ್‌ಸೆಟ್‌ಗಳ ಸಮಸ್ಯೆಯಿಂದಾಗಿ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಟ್ರಾನ್ಸ್ ಫಾರ್ಮರ್‌ಗಳು ಸುಟ್ಟು ಹೋಗುತ್ತಿವೆ.

ಉಪಾಧ್ಯಕ್ಷರು:– ಇಲ್ಲಿ ಗಂಭೀರವಾದಂಥ ವಿಷಯದ ಬಗ್ಗೆ ಚರ್ಚೆಯಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಇರುವ ಮಾನ್ಯ ಸದಸ್ಯರುಗಳಿಗೆ ಹೇಳುವುದೇನೆಂದರೆ ತಾವುಗಳು ಆನಂತರ ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಬಹುದಾಗಿದೆ. ಮಾನ್ಯ ಮುಖ್ಯ ಮಂತ್ರಿಯವರೂ ಸಹ ಇಲ್ಲಿನ ವಿಷಯದ ಬಗ್ಗೆ ಗಮನಹರಿಸಬೇಕಾಗುತ್ತದೆ. ಅದ್ದರಿಂದ, ಮಾನ್ಯ ಸದಸ್ಯರುಗಳು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ನಂತರ ಬನ್ನಿ, ಈಗ ಬೇಡ. ಪ್ರಶ್ನೋತ್ತರವನ್ನು ಮಾನ್ಯ ಮುಖ್ಯ ಮಂತ್ರಿಯವರೂ ಸಹ ಕೇಳಬೇಕು. ಆ ಸಮಸ್ಯೆಯ ಗಂಭೀರತೆ ಅವರಿಗೆ ಅರ್ಥವಾಗಬೇಕು. ಮಾನ್ಯ ಸದಸ್ಯರುಗಳು ಆನಂತರ ಮತ್ತೆ ಅವರನ್ನು ಭೇಟಿ ಮಾಡಿ. ಮಾನ್ಯ ಮಂತ್ರಿಗಳು ಈಗ ಉತ್ತರ ಕೊಡಿ.

ಕು. ಶೋಭಾ ಕರಂದ್ಲಾಜೆ: (ಇಂಧನ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಎಲ್ಲ ಮಾನ್ಯ ಸದಸ್ಯರು ಟ್ರಾನ್ಸ್‌ಫಾರ್ಮರ್‌ನ ಸಮಸ್ಯೆಯ ಆತಂಕವನ್ನು

ವ್ಯಕ್ತಪಡಿಸಿದ್ದಾರೆ. ಇದು ಸತ್ಯ ಇದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅಕ್ರಮ ಪಂಪ್‌ಸೆಟ್‌ಗಳಿವೆ. ನಾವು ಸಹಜವಾಗಿ ನಮ್ಮ ಇಲಾಖೆಯ ಕಾನೂನು ಪ್ರಕಾರ ಸಕ್ರಮ ಪಂಪ್‌ಸೆಟ್‌ಗಳ ಆಧಾರದಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ಕೆಪಾಸಿಟಿಯನ್ನು ಹಾಕಿರುತ್ತೇವೆ. ಅಲ್ಲಿ ಹೆಚ್ಚುವರಿ ಅಕ್ರಮ ಪಂಪ್‌ಸೆಟ್‌ಗಳು ಬಂದಾಗ ಸಹಜವಾಗಿ ಅಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗುತ್ತವೆ. ಈ ಒಂದು ಕಾರಣಕ್ಕಾಗಿ ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡಿಕೊಳ್ಳಿ ಎಂಬ ವಿನಂತಿಯನ್ನು ಈ ಸಾರಿ ನಮ್ಮ ರೈತರಿಗೆ ಮಾಡಿದ್ದೇವೆ. ಒಂದೆರಡು ಕಡೆ ಬಿಟ್ಟರೆ ಉಳಿದಂತೆ ಬಹಳ ಕಡಿಮೆ ಪ್ರಮಾಣದಲ್ಲಿ ನಮ್ಮ ರೈತರು ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡುವುದಕ್ಕೆ ನೋಂದಣಿ ಮಾಡಿದ್ದಾರೆ. ಆದರೆ, ಎಲ್ಲಿ ನೋಂದಣಿ ಮಾಡಿದ್ದಾರೆಯೋ ಅಲ್ಲಿ ಸರ್ಕಾರದಿಂದ ಅಥವಾ ಅಲ್ಲಿನ ಕಂಪನಿಯಿಂದಲೇ ಭರಿಸಿ ಮಾಡುವಂಥ ಕೆಲಸವನ್ನು ಮಾಡುತ್ತೇವೆ. ಟ್ರಾನ್ಸ್‌ಫಾರ್ಮರ್‌ಗಳಿಗೆ ಸಂಬಂಧ ಪಟ್ಟಂತೆ ಹೇಳುವುದಾದರೆ, ಟ್ರಾನ್ಸ್‌ಫಾರ್ಮರ್‌ನ ದುರಸ್ಥಿಯ ಶಾಖೆಗಳನ್ನು ಬಹಳಷ್ಟು ಕಡೆ ಹೆಚ್ಚು ಮಾಡಿದ್ದೇವೆ. ಇನ್ನು ಕೆಲವು ಕಡೆ ಟೆಂಡರ್ ಕರೆಯುವಂಥದ್ದು ಬಾಕಿ ಇದೆ. ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವುದು ಒಂದು ಭಾಗವಾಗಿದೆ. ಹಾಗೆಯೇ ಟ್ರಾನ್ಸ್‌ಫಾರ್ಮರ್‌ಗಳ ರಿಪೇರಿ ಸೆಂಟರ್‌ಗಳನ್ನು ಹೆಚ್ಚು ಮಾಡುವಂಥದ್ದು ಇನ್ನೊಂದು ಭಾಗವಾಗಿದೆ. ಇದನ್ನು ಕೂಡ ನಾವು ಆದಷ್ಟು ಬೇಗ ಮಾಡುತ್ತೇವೆ. ಮಾನ್ಯ ಪಾಟೀಲ್ ರವರು ಕೇಳಿದಂಥ ಕೂಡಗಿಯ ಪ್ರಶ್ನೆ ಮುಖ್ಯವಾಗಿ ಕೇಂದ್ರ ಸರ್ಕಾರದ ಯೋಜನೆಗೆ ಸಂಬಂಧಪಟ್ಟಿದೆ. ಕೂಡಗಿಯಲ್ಲಿ ಕೇಂದ್ರ ಸರ್ಕಾರ 4 ಸಾವಿರ ಮೆ.ವ್ಯಾ. ವಿದ್ಯುಚ್ಛಕ್ತಿ ಕೇಂದ್ರವನ್ನು ಮಾಡಬೇಕೆಂದು ಕ್ರಮವನ್ನು ಕೈಗೊಳ್ಳುತ್ತಿದೆ. ಮೊದಲ ಹಂತದ ಯೋಜನೆಗೆ ಅವರು ಜಮೀನನ್ನು ಕೇಳಿದ್ದಾರೆ. ಇದಕ್ಕಾಗಿ 1900 ಎಕರೆ ಜಮೀನನ್ನು ಕೊಟ್ಟಿದ್ದೇವೆ. ಬೇರೆ ರಾಜ್ಯದಲ್ಲೆಲ್ಲಾ ಕಡೆ ಸೂಪರ್ ಥರ್ಮಲ್ ಯೋಜನೆ ಇದೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಸೂಪರ್ ಥರ್ಮಲ್ ಯೋಜನೆ ಇಲ್ಲವೆಂಬ ಒಂದು ಸದುದ್ದೇಶದಿಂದ ಕೇಂದ್ರ ಸರ್ಕಾರ ಇಲ್ಲಿ ಮಾಡುತ್ತಿದೆ. ಕೇಂದ್ರದಿಂದ ನಮಗೆ ಬರುವ ಶೇರು ಕಡಿಮೆ ಬರುತ್ತಿದೆ. ಈ ಒಂದು ಯೋಜನೆಯಿಂದ ಇದನ್ನು ನೀಗಿಸಬೇಕೆಂಬ ಕಾರಣಕ್ಕಾಗಿ ಅಲ್ಲಿ ಈ ಯೋಜನೆ ಮಾಡುತ್ತಿದ್ದಾರೆ. ಅಲ್ಲಿ ಉತ್ಪಾದನೆಯಾಗುವ 4 ಸಾವಿರ ಮೆ.ವ್ಯಾ. ವಿದ್ಯುತ್‌ನಲ್ಲಿ 2 ಸಾವಿರ ಮೆ.ವ್ಯಾ. ವಿದ್ಯುತ್‌ನ್ನು ಕರ್ನಾಟಕ ರಾಜ್ಯಕ್ಕೆ ಕೊಡಬೇಕೆಂದು

ಅವರು ತೀರ್ಮಾನ ಮಾಡಿದ್ದಾರೆ. ಅಲ್ಲಿನ ಯೋಜನೆಗೆ ರೈತರ ಒಪ್ಪಿಗೆಯಂತೆ ಅವರಿಗೆ ಜಮೀನು ಕೊಡುವಂತಹ ಕೆಲಸ ಮಾಡುತ್ತಿದ್ದೇವೆ.

ಉಪಾಧ್ಯಕ್ಷರು:– ಅಲ್ಲಿನ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಸ್ಯೆಯನ್ನು ಪರಿಹರಿಸುತ್ತೇವೆಂದು ಹೇಳಿ.

ಕು.ಶೋಭಾ ಕರಂದ್ಲಾಜೆ: (ಇಂಧನ ಸಚಿವರು): ಅವರ ಜೊತೆ ಕೂಡ ಸಂಪರ್ಕ ಮಾಡಿ ಖಂಡಿತಾ ಸಮಸ್ಯೆಯನ್ನು ಬಗೆಹರಿಸುತ್ತೇವೆ.

ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ): ಅಲ್ಲಿನ ರೈತರು ಹೋರಾಟ ಮಾಡುವಂಥದ್ದು ನಿಮ್ಮ ಗಮನಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳುತ್ತಿದ್ದೇನೆ. ರೈತರನ್ನು ಕರೆದು ಚರ್ಚೆ ಮಾಡಬೇಕಾಗಿದೆ. ಆದ್ದರಿಂದ, ಸರ್ಕಾರ ಏನು ಮಾಡುತ್ತಿದೆ ಎಂದು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು:– ಮಾನ್ಯ ಪಾಟೀಲ್‌ರವರೆ, ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ಅರ್ಧ ಗಂಟೆ ಕಾಲಾವಧಿಯಲ್ಲಿ ತೆಗೆದುಕೊಂಡು ಚರ್ಚೆ ಮಾಡೋಣ.

ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ): ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ.

ಉಪಾಧ್ಯಕ್ಷರು:– ಈ ಸಮಸ್ಯೆಗಳ ಗಂಭೀರತೆಯ ಬಗ್ಗೆ ಚರ್ಚೆ ಮಾಡಲು ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ. ಈಗ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ):– ರೈತರನ್ನು ಕರೆದು ಸಭೆ ಮಾಡುತ್ತೇವೆಂದಾರೂ ಕೊನೇ ಪಕ್ಷ ಮಾನ್ಯ ಸಚಿವರು ಸೌಜನ್ಯಕ್ಕಾದರೂ ಈಗ ಹೇಳಲಿ.

ಉಪಾಧ್ಯಕ್ಷರು:– ತಾವು ದಯವಿಟ್ಟು ಕುಳಿತುಕೊಳ್ಳಿ. ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ. ಸಮಗ್ರವಾಗಿ ಅದರ ಬಗ್ಗೆ ಚರ್ಚೆ ಮಾಡೋಣ.

ಸರ್ಕಾರಿ ಮೆಡಿಕಲ್ ಕಾಲೇಜುಗಳ ಸ್ವಂತ ಕಟ್ಟಡ

37(504) ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ) :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿರುವ ಸರ್ಕಾರಿ ಮೆಡಿಕಲ್ ಕಾಲೇಜುಗಳು ಹೊಂದಿರುವ ಸ್ವಂತ ಕಟ್ಟಡಗಳೆಷ್ಟು ಹಾಗೂ ಸ್ವಂತ ಕಟ್ಟಡಗಳಿಲ್ಲದೆ ನಡೆಸುತ್ತಿರುವ ಕಾಲೇಜುಗಳೆಷ್ಟು; ಜಿಲ್ಲಾವಾರು ಮಾಹಿತಿ ನೀಡುವುದು;